# ಆಹಾ ಬಿರಿಯಾನಿ; ಗೋಬಿ ಮಂಚೂರಿ!



ಉಗಾಂಡದಿಂದ ಬಂದ ನಮುಝು ರಚೆಲ್

ಈ ದೇಶದ ಸೆಳೆತವೇ ಅಂತದ್ದು. ಒಂದಿಲ್ಲೊಂದು ಕಾರಣದಿಂದ ವಿದೇಶಿಗರನ್ನು ತನ್ನತ್ತ ಕೈಬೀಸುತ್ತದೆ. ಪ್ರವಾಸ, ನೆಮ್ಮದಿ ಅರಸಿ, ಯೋಗ ಕಲಿಕೆ, ಸಂಶೋಧನೆ, ವ್ಯಾಸಂಗಕ್ಕಾಗಿ ಭಾರತಕ್ಕೆ ದಾಪುಗಾಲಿಡುವ ವಿದೇಶಿಗರ ಸಂಖ್ಯೆ ಏರುಗತಿಯಲ್ಲೇ ಇದೆ. ವಿಶ್ವದ ಸಣ್ಣ– ಸಣ್ಣ ರಾಷ್ಟ್ರಗಳನ್ನೂ ಭಾರತ ಬಹುವಾಗಿ ಆಕರ್ಷಿಸುತ್ತಿದೆ. ಉನ್ನತ ವ್ಯಾಸಂಗ ತಮ್ಮ ದೇಶದಲ್ಲಿ ಕಷ್ಟವೆನಿಸಿದರೆ, ಪ್ರತಿಷ್ಠಿತ ಕಾಲೇಜುಗಳಲ್ಲಿ ಸೀಟು ಸಿಗದಿದ್ದರೆ ವಿದ್ಯಾರ್ಥಿಗಳು ಮುಖ ಮಾಡುವುದು ಭಾರತದತ್ತ. ಹೀಗೆ ಬಂದವರಲ್ಲಿ ಉಗಾಂಡದ ನಮುಝು ರಚೆಲ್ ಕೂಡ ಒಬ್ಬರು.

ಮೈಸೂರಿನಲ್ಲಿ ಕಾನೂನು ಪದವಿ ವ್ಯಾಸಂಗ ಮಾಡುತ್ತಿರುವ ನಮುಝು ರಚೆಲ್ 2014ರಿಂದ ಇಲ್ಲಿ ನೆಲೆಸಿದ್ದಾರೆ. ಉಗಾಂಡದಲ್ಲಿ ಕಾನೂನು ಪದವಿಗೆ ಪ್ರವೇಶ ಪಡೆಯಲು ರಾಜಕೀಯ ವ್ಯಕ್ತಿಗಳ ಅಥವಾ ಪ್ರಭಾವಿಗಳ ಸಂಪರ್ಕ ಹೊಂದಿರಬೇಕು. ಅಂಥವರಿಗೆ ಮಾತ್ರ ಅಲ್ಲಿ ಪ್ರವೇಶ. ಅಲ್ಲದೆ ಡೊನೇಷನ್ ಕೂಡ ಹೆಚ್ಚು. ಪ್ರತಿ ಸೆಮಿಸ್ಟರ್‌ಗೂ ಇಲ್ಲಿಗಿಂತ ಹೆಚ್ಚು ಡೊನೇಷನ್ ತೆರಬೇಕು. ಆದ್ದರಿಂದ ಕಾನೂನು ಓದಲೇಬೇಕೆಂಬ ಹಂಬಲವನ್ನು ಭಾರತದಲ್ಲಿ ಈಡೇರಿಸಿಕೊಳ್ಳಲು ಬಂದಿದ್ದಾರೆ ರಚೆಲ್.

‘ಭಾರತದಲ್ಲಿ ಶಿಕ್ಷಣಕ್ಕೆ ಉತ್ತಮ ಪ್ರೋತ್ಸಾಹ ಇದೆ. ಇಲ್ಲಿ ಶಿಕ್ಷಣಕ್ಕಾಗಿ ವಿನಿಯೋಗಿಸುವ ದುಪ್ಪಟ್ಟು ಹಣವನ್ನು ನಮ್ಮ ದೇಶದಲ್ಲಿ ತೆರಬೇಕು. ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದೆ. ಇಲ್ಲಿ ಸೀಟು ಸಿಕ್ಕಿತು’ ಎಂದು ಮುಗುಳ್ನಗುತ್ತಾರೆ ನಮುಝು.

ಉಗಾಂಡದಲ್ಲಿರುವ ಪಂಗಡಗಳಲ್ಲಿ ಅತಿ ದೊಡ್ಡದು ಬಗಂಡ. ಈ ಪಂಗಡದಿಂದ ಬಂದಿರುವ ರಚೆಲ್, ಇಲ್ಲಿನ ಸಂಸ್ಕೃತಿ, ಆಚಾರ– ವಿಚಾರಗಳನ್ನು ಬಹುವಾಗಿ ಮೆಚ್ಚಿಕೊಳ್ಳುತ್ತಾರೆ. ಬಗಂಡದಲ್ಲಿ ಹೆಣ್ಣುಮಕ್ಕಳು ಹಾಕಿಕೊಳ್ಳುವ ಬಟ್ಟೆಗೆ ‘ಗೊಮ್ಮೆಝು’ ಎಂತಲೂ, ಪುರುಷರ ಉಡುಪಿಗೆ ‘ಕಾಂಜೂಸ್’ ಎಂದು ಕರೆಯುತ್ತಾರೆ.

‘ಇಲ್ಲಿನ ಉಡುಪಿನ ಸಂಸ್ಕೃತಿಗೂ ನಮ್ಮದಕ್ಕೂ ಸಂಪೂರ್ಣ ಭಿನ್ನ. ಗಂಡು ಮಕ್ಕಳು ಇಲ್ಲಿ ಪಂಚೆ ತೊಟ್ಟು ಮೇಲೆ ಕಟ್ಟುತ್ತಾರೆ. ಈ ರೀತಿಯ ಉಡುಪು ನಮ್ಮಲ್ಲಿಲ್ಲ. ಪುರುಷರು ತಮ್ಮ ಕಾಲುಗಳು ಕಾಣುವ ಹಾಗೆ ಬಟ್ಟೆ ತೊಡುವ ಹಾಗಿಲ್ಲ. ಪಾದದವರೆಗೂ ಬಟ್ಟೆಯನ್ನು ಧರಿಸಬೇಕು. ಹೆಣ್ಣುಮಕ್ಕಳ ಧಿರಿಸಿನ ಶೈಲಿಯೂ ಇಲ್ಲಿಗಿಂತ ಭಿನ್ನ. ಸೀರೆಯ ಮಾದರಿಯ ಉಡುಪನ್ನು ನಮ್ಮ ದೇಶದಲ್ಲೂ ಉಡುತ್ತೇವೆ. ಆದನ್ನು ತೊಡುವ ವಿಧಾನ ಬೇರೆ. ಇಲ್ಲಿ, ಅತಿ ಕಡಿಮೆ ಬೆಲೆಗೆ, ವೈವಿಧ್ಯಮಯ ಸೀರೆಗಳು ಸಿಗುತ್ತವೆ. ನಮ್ಮಲ್ಲಿ ತುಂಬಾ ದುಬಾರಿ. ಹಾಗಾಗಿ, ಇಲ್ಲಿಂದ ಹೊರಡುವಾಗ ಒಂದಷ್ಟು ಸೀರೆ ಕೊಂಡೊಯ್ಯಬೇಕೆಂದಿದ್ದೇನೆ’ ಎನ್ನುತ್ತಾರೆ ಅವರು.

ಜಾತಿ ಭಿನ್ನತೆ ಬಗ್ಗೆ ಮಾತನಾಡುವ ರಚೆಲ್, ‘ಇಲ್ಲಿ ಅನೇಕ ಜಾತಿಗಳಿವೆ. ಎಲ್ಲರೂ ಅವರವರ ಜಾತಿ ರಕ್ಷಣೆಗೆ ನಿಲ್ಲುತ್ತಾರೆ. ನಮ್ಮ ದೇಶದಲ್ಲಿ ಹಾಗಲ್ಲ. ಬಹಳಷ್ಟು ಬುಡಕಟ್ಟುಗಳು ಇದ್ದರೂ, ಒಬ್ಬರಿಗೊಬ್ಬರು ಪರಸ್ಪರ ಗೌರವದಿಂದ ಕಾಣುತ್ತಾರೆ. ದೇಶದ ಏಕತೆಯನ್ನು ಬಿಂಬಿಸುತ್ತಾರೆ’ ಎನ್ನುತ್ತಾರೆ.

ಆರಂಭದಲ್ಲಿ ಇಲ್ಲಿನ ಶಿಕ್ಷಣ ಪದ್ಧತಿ ಕಂಡು ಆಶ್ಚರ್ಯಚಕಿತರಾದ ರಚೆಲ್, ಈಗೀಗ ಹೊಂದಿಕೊಳ್ಳುತ್ತಿದ್ದಾರಂತೆ. ಉಗಾಂಡದಲ್ಲಿ ಶಿಕ್ಷಕರು ಪಾಠ ಮಾಡಿ ನೋಟ್ಸ್ ಕೊಡುವ ಪದ್ಧತಿ ಇಲ್ಲ. ಬೋಧನೆ ಮಾತ್ರ ಶಿಕ್ಷಕರ ಕೆಲಸ. ವಿದ್ಯಾರ್ಥಿಗಳು ಪಠ್ಯೇತರ ಪುಸ್ತಕಗಳನ್ನು ಅಧ್ಯಯನ ಮಾಡಿ, ಪಠ್ಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕಲೆ ಹಾಕಬೇಕು. ಪರೀಕ್ಷೆಗಳಲ್ಲೂ ಪಠ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗಿಂತ ಅನುಭವ ಆಧಾರಿತ ಪ್ರಶ್ನೆಗಳು ಇರುತ್ತವೆ. ಜತೆಗೆ ಹಾಜರಾತಿ ಕೂಡ ಕಡ್ಡಾಯವಲ್ಲ. ಇಷ್ಟವಾದರೆ ತರಗತಿಗೆ ಹಾಜರಾಗಬಹುದು. ಹಾಗಾಗಿ, ಮೊದಮೊದಲು ಇಲ್ಲಿನ ಪದ್ಧತಿಗೆ ಹೊಂದಿಕೊಳ್ಳಲು ಕಷ್ಟಪಟ್ಟಿದ್ದಾರೆ ರಚೆಲ್.

‘ಇಲ್ಲಿನ ಶಿಕ್ಷಣ ಕಲಿಕೆಯಲ್ಲಿ ಕಾಳಜಿ, ಆತ್ಮೀಯತೆ ಇದೆ. ಶಿಕ್ಷಕರು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಬಗ್ಗೆ ಸಾಕಷ್ಟು ಕಾಳಜಿ ವಹಿಸುತ್ತಾರೆ. ಪೋಷಕರ ರೀತಿ ನಮ್ಮನ್ನು ಅಕ್ಕರೆಯಿಂದ ಕಾಣುತ್ತಾರೆ. ಈಗೀಗ ಇಲ್ಲಿನ ಪದ್ಧತಿಯೇ ಇಷ್ಟವಾಗುತ್ತಿದೆ’ ಎನ್ನುತ್ತಾರೆ.

ಭಾರತಕ್ಕೆ ಬಂದು ಮೂರು ವರ್ಷ ಕಳೆದಿದ್ದು, ಒಮ್ಮೆಯೂ ತವರೂರಿಗೆ ಹೋಗಿಲ್ಲ. ‘ಮೊದಲ ಸೆಮಿಸ್ಟರ್‌ನಲ್ಲಿ ತವರೂರು ಬಹುವಾಗಿ ಕಾಡಿತು. ಇಲ್ಲಿನ ಸ್ನೇಹಿತರ ಒಡನಾಟ ದುಗುಡವನ್ನು ದೂರ ಮಾಡಿತು. ಇಲ್ಲಿಯೂ ಕುಟುಂಬದ ಸದಸ್ಯರೊಂದಿಗೆ ಇರುವಂತೆ ಅನುಭವವಾಗುತ್ತದೆ. ಉಪನ್ಯಾಸಕರು, ಸ್ನೇಹಿತರು ನನ್ನ ಬಗ್ಗೆ ತೋರುವ ಕಾಳಜಿಗೆ ಆಭಾರಿಯಾಗಿದ್ದೇನೆ’ ಎನ್ನುವ ಇವರು ರಾಜಕೀಯದ ಬಗ್ಗೆ ಹೇಳುತ್ತಾ ‘ನಮ್ಮ ದೇಶದಲ್ಲೂ ಪ್ರಜಾಪ್ರಭುತ್ವ ಇದೆ. ಆದರೆ, ಇಲ್ಲಿಯಷ್ಟು ವ್ಯವಸ್ಥಿತವಾಗಿಲ್ಲ. ಇಲ್ಲಿ ಪ್ರತಿ 5 ವರ್ಷಕ್ಕೊಮ್ಮೆ ಸರ್ಕಾರ ಬದಲಾಗುತ್ತದೆ. ನಮ್ಮಲ್ಲಿ ನಾನು ಹುಟ್ಟಿದಾಗಿನಿಂದ ಒಬ್ಬರೇ ಪ್ರಧಾನಿ. 32 ವರ್ಷಗಳಿಂದ ಒಬ್ಬರೇ ನಮ್ಮನ್ನು ಆಳುತ್ತಿದ್ದಾರೆ’ ಎನ್ನುತ್ತಾರೆ.

ಇಲ್ಲಿನ ಬಿರಿಯಾನಿ, ಗೋಬಿ ಮಂಚೂರಿ, ಚಿಕನ್ ಕಬಾಬ್ ಅವರ ಬಾಯಲ್ಲಿ ನೀರೂರಿಸುತ್ತವೆ. ಮಾಂಸಾಹಾರ, ಸಸ್ಯಾಹಾರ ಎರಡನ್ನೂ ಇಷ್ಟ ಪಡುವ ರಚೆಲ್ ಅವರಿಗೆ, ಉಗಾಂಡದಲ್ಲಿ ಸಿಗುವ ‘ಮಂಟೊಕಿ’ ಇಷ್ಟದ ಖಾದ್ಯವಂತೆ.

“ದೆಹಲಿ, ಮುಂಬೈ, ಪೂನಾ, ಹೈದರಾಬಾದ್, ಚೆನ್ನೈ, ಭೋಪಾಲ್, ಬೆಂಗಳೂರು ಹೀಗೆ ಪ್ರಮುಖ ನಗರಿಗಳನ್ನು ಸುತ್ತುಹಾಕಿರುವ ರಚೆಲ್ ಈ ಎಲ್ಲಕ್ಕಿಂತ ಮೈಸೂರು ಅಚ್ಚುಮೆಚ್ಚು’ ಎನ್ನುತ್ತಾರೆ.

■ ಸುಮಾ ಬಿ.